ಶ್ರೀ ಜೆ. ಎಚ್. ಪಟೇಲ್.—ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ನಾನು ಒಂದು ಕಾರಣ ಹೇಳುತ್ತೇನೆ. ಈ ಸಬ್ಜೆಕ್ಟ್ ಓಟ್ ಡೌನ್ ಮಾಡಿದರೆ ಚೆನ್ನಾಗಿ ಕಾಣುವುದಿಲ್ಲ. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ, ಒಳ್ಳೆಯ ವಿಷಯ. ಆದರೆ ಪಾಸ್ ಮಾಡುವ ರೆಸಲ್ಯೂಷನ್ ಅಲ್ಲ. ಆದ್ದರಿಂದ ದಯವಿಟ್ಟು ವಿತ್‌ಡ್ರಾ ಮಾಡಿ.

ಶ್ರೀ ಬಿ. ಜಿ. ಕೊಟ್ರಪ್ಪ —ಆವಶ್ಯಕವಾದ ತೀರ್ಮಾನದ ಬಗ್ಗೆ ಖಾಸಗಿ ಸದಸ್ಯರಿಂದ ನಿರ್ಣಯ ಬಂದರೆ ಅಷ್ಟು ಎಫಿಕ್ಟೀವಾಗಿ ಇರುವುದಿಲ್ಲ. ಸರ್ಕಾರದಿಂದ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ಬಿ. ಎಂ, ತಿಪ್ಪೇಸ್ವಾಮಿ.—ನಿಮ್ಮೆಲ್ಲರ ಅಭಿಪ್ರಾಯ ಆದಾಗುವುದಾದರೆ ನಾನೂ ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು. —''ಪ್ರಸ್ತಾಪವನ್ನು ಹಿಂತೆದುಕೊಳ್ಳುವುದಕ್ಕೆ ಸಭೆಯ ಅನುಮತಿ ಇದೆಯೇ?''

ಹಿಂತೆಗೆದುಕೊಳ್ಳಲು ಸಭೆಯು ಅನುಮತಿ ನೀಡಿತು.

ನಿರ್ಣಯವನ್ನು ಹಿಂತೆಗೆದುಕೊಳ್ಳಲಾಯಿತು.

೨) ಮದ್ಯಪಾನ ನೀತಿ ಸಂಧಾರಣೆ ಮಾಡಲು ಉನ್ನತಾಧಿಕಾರ ಸಮಿತಿ ನೇಮಕ ಮಾಡುವ ಬಗ್ಗೆ

†ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ಕೆಳಗಿನ ನಿರ್ಣಯವನ್ನು ಸಭೆಯಂ ಮುಂದೆ ಮಂಡಿಸುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ.

> ''ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀ ಸಾಮಾನ್ಯನ ಹಾಗೂ ಬಡಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯಂ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.''

ಸನ್ಮಾನ್ಯ ಅಧ್ಯಕ್ಷರೆ, ನಾನು ಹಲವಾರು ದಿವಸಗಳಿಂದ ಇಂಥ ಒಂದು ಗಂಭೀರ ವಿಷಯವನ್ನು ಈ ಸದನದ ಮುಂದೆ ತಂದು ಪಕ್ಷ ಪಂಗಡಗಳ ಭಿನ್ನಭೇದವಿಲ್ಲದೆ ಆ ಆಯಾಮಗಳನ್ನು ತರದೆ ಚಿಂತನೆ ಮಾಡ ಬೇಕೆಂದು ಆಸೆಪಟ್ಟಿದ್ದೆ. ನಿಜ, ಇವತ್ತಿನ ಸಂದರ್ಭ ಅದಕ್ಕೆ ಅಷ್ಟು ಸರಿಯಾಗಿಲ್ಲ. ಏಕೆಂದರೆ ನಾನೇನಾದರೂ ಕೆಲವು ಮಾತುಗಳನ್ನು ಆಡಿದರೆ ಅದು ಇತ್ತೀಚಿನ ಕೆಲವು ಘಟನೆಗಳು ನಿರ್ಮಾಣ ಮಾಡಿದ ವಾತಾವರಣದಿಂದ ಅದಕ್ಕೆ ಜೋಡಣೆಯಾಗಿ ಬಂತು ಎಂದು ವಿಕೃತಕ್ಕೆ ಒಳಗಾಗುವ ಅಪಾಯ ಇದೆ. ನಾನು ಬಹಳ ಕಳಕಳಿಯಿಂದ ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ನಡೆದಿರುವ ಘಟನೆಗೂ ಈ ನಿರ್ಣಯಕ್ಕೂ ಏನೂ ಸಂಬಂಧ ಇಲ್ಲದೇ ಇರುವುದರಿಂದ ಅದರ ಛಾಯೆಯ ಅಡಿಯಲ್ಲಿ ಈ ನಿರ್ಣಯವನ್ನು ನೋಡಬಾರದು. ನಾನೂ ಕೂಡ ತ ಯಾವ ಆಯಾಮಗಳೂ ಬರದೇ ಇರುವಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉದ್ದೇಶಶುದ್ಧಿಯಿಂದ ಇದನ್ನು ನೋಡುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ವಿಚಾರ ಒಪ್ಪುತ್ತೇನೆ, ಮದ್ಯಪಾನ ವ್ಯವಸ್ಥೆ ಏನಿದೆ ಯಾರೇ ಹೇಳಲಿ ಒಂದು ರಾಜ್ಯ ಸರ್ಕಾರ ತನಗಿಷ್ಟ ಬಂದಂತೆ ಮಾಡಿ ಯಶಸ್ವಿಯಾಗುವ ವ್ಯವಸ್ಥೆ ಅಲ್ಲ. ಇದನ್ನು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲಾ ಎಂದು ಸೂಚಿಸುತ್ತದೆ.

ಜೆ.ಎಚ್. ಪಟೇಲರು ಬೆಳಗ್ಗೆ ಹೇಳುತ್ತಿದ್ದರು. ಕೇವಲ ಕರ್ನಾಟಕ ಸರ್ಕಾರ ಮಾತ್ರ ಒಂದು ವ್ಯವಸ್ಥೆ ಬದಲಾಯಿಸಿದರೆ ಪರಿಣಾಮಕಾರಿಯಾಗುವುದಿಲ್ಲ. ಆದೇನೇ ಇರಬಹುದು. ಈಗಿರತಕ್ಕ ವ್ಯವಸ್ಥೆಗೆ ಪರ್ಯಾಯವಾಗಿ ಮುಖ್ಯವಾಗಿ ಜೆ.ಎಚ್. ಪಟೇಲರು ಗಮನ ಕೊಡಬೇಕಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರ ಹತ್ತಿರ ನಾನು ಹಲವಾರು ಸಂದರ್ಭಗಳಲ್ಲಿ ಈ ವಿಚಾರವನ್ನು ಚರ್ಚೆ ಮಾಡುವ ಅವಕಾಶ ಕೂಡ ಒದಗಿತ್ತು. ಇದರಲ್ಲಿ ಕೆಲವೊಂದು ಅಭಿಪ್ರಾಯಗಳನ್ನು ಒಟ್ಟಿಗೆ ಹಂಚಿ ಕೊಂಡು ಕೂಡ ವಿಚಾರ ಮಾಡಿದ್ದೇವೆ. ಇವತ್ತು ಮದ್ಯಪಾನದ ವ್ಯವಸ್ಥೆ ಅಥವಾ ನೀತಿಯನ್ನು ಒಂದು ರಾಜ್ಯಕ್ಕೆ ಸೀಮಿತವಾಗಿ ಬೇಲಿ ಕಟ್ಟಿಕೊಂಡು ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಪ್ರಪ್ರಥಮವಾಗಿ ಒಪ್ಪಿಕೊಳ್ಳುವುದಕ್ಕೆ ಬಯಸುತ್ತೇನೆ. ಈ ನಿರ್ಣಯ ತಂದಂಥ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಒಂದೇ ಬೇರೆ ಮಾಡಬೇಕು ಎಂಬ ಸಲಹೆಯನ್ನು ನಾನು ಕೊಡುವುದಕ್ಕೆ ತಯಾರಿಲ್ಲ. ನಿಜವಾಗಿಯೂ ಕೂಡ ಇಡೀ ಭಾರತ, ರಾಷ್ಟ್ರ ಮದ್ಯಪಾನದ ಬಗ್ಗೆ ಒಂದು ನೀತಿಯನ್ನು ವ್ಯವಸ್ಥೆಯನ್ನು ಹೊಸದಾಗಿ ಕಂಡುಕೊಳ್ಳಬೇಕಾದ ಅಗತ್ಯ ಬಹಳ ಇದೆ ಎಂದು ನನ್ನ ಭಾವನೆ ಒಂದು ಸಂದರ್ಭದಲ್ಲಿ ಕರ್ನಾಟಕ ರಾಜ್ಯದವರೇ ಇಡೀ ರಾಷ್ಟ್ರಕ್ಕೆ ಮಾದರಿಯಾಗುವುದಕ್ಕೆ ಮಾಡಲು ಸಾಧ್ಯವಿದ್ದರೆ ಬಹಳ ಸಂತೋಷ. ಆದು ಸಾಧ್ಯಾಸಾಧ್ಯತೆಯನ್ನು ಅವಲಂಬಿಸಿದೆ. ಈಗಲೇ ಸಾಧ್ಯ ಎಂದು ಒಂದು ಪಂಥವನ್ನು ಕಟ್ಟುವುದಕ್ಕೆ ನಾನು ತಯಾರಿಲ್ಲ. ಮದ್ಯಪಾನ ಬಹಳ ಪುರಾತನವಾದುದು. ನಾಗರೀಕತೆಯು ಯಾಪ ಪಂಜಲಿನಲ್ಲಿ ಇದು ಹುಟ್ಟಿತೋ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್.—ಅಜಮಿಳನ ಕಾಲದಲ್ಲಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಬಹಳ ಹಿಂದೆ ವೇದ ಕಾಲದಲ್ಲಿ ಯಜ್ಞಯಾಗಾದಿಗಳನ್ನು ಮಾಡಿದರೆ ಅದರ ತಂದಿಯಲ್ಲಿ ಸೋಮರಸವನ್ನು ಸೃಷ್ಟಿ ಮಾಡಿ ಪಾನ ಮಾಡುತ್ತಿದ್ದರು ಎಂದು ಕೇಳಿದ್ದೇವೆ. ದೇವತೆಗಳಿಗಂತೂ ಸ್ಪೆಷಲ್ ಪಾನ ಇತ್ತು. ದೇವತೆಗಳ ರಾಯಲ್ ಸೆಲ್ಯೂಟ್ ಆದು. ಆದರೆ ಮನುಷ್ಯರೂ ಕೂಡ ಸೋಮಪಾನ ಮಾಡುತ್ತಿದ್ದರು. ಯಜ್ಞಯಾಗಾದಿಗಳ ಸಾರ್ಥಕತೆಯ ಅಂಶಗಳಲ್ಲಿ ಸೋಮರಸವನ್ನು ಕುಡಿಯತಕ್ಕದ್ದೂ ಇತ್ತು ಎಂದು ಹೇಳುವುದನ್ನು ನಾವು ಕೇಳಿದ್ದೇವೆ. ಇದರ ನಿಜವಾದ ಅರ್ಥಗಳೇನು, ಸೂತ್ರಗಳೇನು ಎಂಬ ಬಗ್ಗೆ ವಿಶೇಷವಾದ ಪಾಂಡಿತ್ಯ ನಾನು ಪಡೆದಿಲ್ಲ. ಒಂದಂತೂ ನಿಜ. ನಮ್ಮ ನಾಗರೀಕತೆ ಹುಟ್ಟಿದ ಸಂದರ್ಭದಿಂದಲೇ ಬಹುಶಃ ಅದರ ತಾರುಣ್ಯಾವಸ್ಥೆಯಲ್ಲೇ ಈ ಮದ್ಯಪಾನವನ್ನು ಮನುಷ್ಯ ಕಂಡುಹಿಡಿದುಕೊಂಡಿದ್ದಾನೆ. ಇದು ಬರೀ ನಮ್ಮ ದೇಶ ಮಾತ್ರವಲ್ಲ. ಪ್ರಪಂಚದಾದ್ಯಂತ ಎಲ್ಲಾ ಕಡೆಯೂ ಇರತಕ್ಕ ವಿಚಾರ. ಒಂದು ಪ್ರಶ್ನೆ ಬರುತ್ತದೆ. ಕೆಲವರು ಮದ್ಯಪಾನ ಮಾಡತಕ್ಕದ್ದೇ ತಪ್ಪು ಎಂದು ಹೇಳಬಹುದು ವ್ಯಕ್ತಿಗತ ನೆಲೆಯಲ್ಲಿ ತಪ್ಪು ಸರಿಗಳ ವಿಚಾರ ಏನೇ ಇರಬಹುದು. ನಾನು ಸ್ವತಃ ಕುಡಿಯದೇ ಇರಬಹುದು. ಅಥವಾ ಕುಡಿತ ನನಗೆ ಅಗತ್ಯ ಅಲ್ಲದೇ ಇರಬಹುದು. ನನಗೆ ಅಗತ್ಯವಿಲ್ಲ ಅಥವಾ ನಾನು ಕುಡಿಯುವುದಿಲ್ಲ ಎಂದು ಕುಡಿಯುವುದೇ ತಪ್ಪು ಎಂದು ಯೋಚನೆ ಮಾಡುವುದೂ ನನಗೆ ಸಾಧ್ಯವಾಗುತ್ತಿಲ್ಲ. ತಪ್ಪೋ ಸರಿಯೋ ಎಂಬ ಪ್ರಶ್ನೆಗಿಂತ ಉದ್ದೇಶ, ಆದರ ಗತಿ ಏನಾಗಿದೆ ಎಂಬುದು ಮುಖ್ಯ. ಕುಡಿತದಿಂದ ಆಗತಕ್ಕ ಪರಿಣಾಮಗಳನ್ನು ಯಾವ ರೀತಿಯಲ್ಲೂ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಪಾನನಿರೋಧವನ್ನು ಯಶಸ್ವಿಗೊಳಿಸುವುದು ಒಂದೇ ಮಾರ್ಗ ಎಂದರೆ ನನಗೇನೂ ತೊಂದರೆ ಇಲ್ಲ. ವೈಯಕ್ತಿಕವಾಗಿ ನಾನು ಸಿದ್ಧನಾಗಿದ್ದೇನೆ. ಆದ್ದರಿಂದ ಇದಕ್ಕೆ ನನ್ನ ಬೆಂಬಲ ಸಂಪೂರ್ಣವಾಗಿದೆ. ಆದರೆ ಇದನ್ನೇ ಒಂದು ನೀತಿಯಾಗಿ ಜನಗಳ ಮೇಲೆ ಹೇರುವುದಕ್ಕೆ ಸಾಧ್ಯವೇ, ಸಾಧ್ಯವಿಲ್ಲವೇ ಎಂಬ ವಿಚಾರದಲ್ಲಿ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಅಷ್ಟು ಸುಲಭವಾಗಿ ಪಾನನಿರೋಧ ತಂದುಬಿಡಿ ಎಂದು ಹೇಳಿದರೆ ತರುವುದಕ್ಕಾಗುವುದಿಲ್ಲ. ಅಥವಾ ಈಗಿರುವ ವ್ಯವಸ್ಥೆ ಇನ್ನೂ ಆದ್ವಾನ ಆಗಬಹುದು. ಅಥವಾ ಈ ವ್ಯವಸ್ಥೆ ಯಶಸ್ವಿ ಆಗದೇ ಇರಬಹುದು.

ಆದರೆ ಇವತ್ತು ಏನಾಗಿದೆ ಎಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಏನು ಒಂದು ಮದ್ಯಪಾನ ನೀತಿ ಮತ್ತು ವ್ಯವಸ್ಥೆ ಇದೆ, ಆದು ತಮಗೆ ಇದು ಗೊತ್ತಿರಬಹುದು. ನಮ್ಮ ರಾಜ್ಯದಲ್ಲೂ ಕೂಡಾ ಪಾನನಿರೋಧವೇ ಜಾರಿಯಲ್ಲಿ ಇರತಕ್ಕದು. ಕಾನೂನು ಪ್ರಕಾರ ನಮ್ಮ ರಾಜ್ಯದಲ್ಲಿ ಪಾನನಿರೋಧದ ಕಾನೂನು ಜಾರಿಯಲ್ಲಿದೆ. ಅದನ್ನು ಸಡಿಲಿಸುವುದಕ್ಕೆ ಕೆಲವು ಅವಕಾಶಗಳಿವೆಯಲ್ಲದೇ ಆ ವಿಧಿಗಳನ್ನು ಉಪಯೋಗಿಸಿ ಇವತ್ತು ನಾವು ಪಾನ ವ್ಯವಸ್ಥೆಯನ್ನು ಜಾರಿಗೆ ಕೊಟ್ಟಿದ್ದೇವೆ. ಕಾನೂನು ಪ್ರಕಾ

ಇವತ್ತು ಕರ್ನಾಟಕ ರಾಜ್ಯದಲ್ಲಿ ಪಾನನಿರೋಧ ಕಾನೂನು ಜಾರಿಯಲ್ಲಿದೆ. ಇದು ದೊಡ್ಡ ವೈಪರೀತ್ಯ. ಇದು ಒಂದು ರೀತಿಯ ನಮ್ಮನ್ನು ನಾವೇ ಕಾನೂನು ಪುಕಾರ ವಂಚಿಸಿಕೊಳ್ಳುತ್ತೇವೆನ್ನುವುದಕ್ಕೆ ಮಾದರೀ ಉದಾಹರಣೆ. ನನಗೆ ಪಾನನಿರೋಧದ ಆಕ್ಟ್ ಸಿಗಲಿಲ್ಲ. ಅದು ಸಿಕ್ಕಿದ್ದರೆ ಕೆಲವೊಂದು ವಿಷಯಗಳನ್ನು ಹೇಳಬಹುದಿತ್ತು. ಸರ್ಕಾರ ಕೆಲವೊಂದು ಕಾರಣಗಳಿಗೋಸ್ಕರವಾಗಿ ಕೆಲವೊಂದು ವಿರಿಯಾಗಳಲ್ಲಿ ಇದನ್ನು ಸಡಿಲಿಸಬೇಕೆಂದಿತ್ತು. ಹಿಂದೆ ನಮ್ಮ ಜತ್ತಿಯವರ ಕ್ಷೇತ್ರದಲ್ಲಿ ಇದನ್ನು ಮಾದರಿಯಾಗಿ ಇಟ್ಟುಕೊಂಡಿದ್ದರು. ಚಾಮರಾಜನಗರದಲ್ಲಿ Subjected to Consciousness ಆಗಿ ೬ ತಾಲ್ಲೂಕುಗಳಲ್ಲಿ ಇತ್ತು. ಈಗ ಅದೂ ಕೂಡಾ ಹೋಯಿತು. ಶ್ರೀಮತಿ ಯಶೋಧರಮ್ಮ ದಾಸಪ್ಪನವರು ತಮ್ಮ ಆತ್ಮಸಾಕ್ಷಿಗೆ ವಿರುದ್ಧ ಕಾನೂನು ಮಾಡಿದ್ದರ ಬಗ್ಗೆ ಪ್ರತಿಭಟಿಸಿದರು. ಇವತ್ತು ನಮ್ಮ ರಾಜ್ಯದಲ್ಲಿ ಏನು ಮದ್ಯಪಾನದ ವ್ಯವಸ್ಥೆ ಇದೆಯೋ ಅದು ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರ ಆ ಕಾಲದಲ್ಲೆ ಪರಿಣತಿಗೆ ಬಂದಿತು. ಆಪರು ಹಿಂದೆ ಅರ್ಥ ಸಚಿವರಾಗಿ ಹಾಗೂ ಅಬಕಾರಿ ಸಚಿವರಾಗಿದ್ದಾಗ ಆ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಬೇರೆ ಬೇರೆ ಸರ್ಕಾರಗಳು ಬಂದರೂ ಕೂಡಾ ಅವರು ಹಾಕಿದ ಭದ್ರ ವ್ಯವಸ್ಥೆ ದಪ್ಪವುಪ್ಪವಾಗಿ ಬೆಳೆದು ಇವತ್ತು ಎಲ್ಲಾ ಕಡೆಯಲ್ಲೂ ಅದು ವ್ಯಾಪಕವಾಗಿ ಹರಡಿ ನಿಂತಿದೆ. ಇದು ಇವತ್ತು ಅವರನ್ನೇ ಹೆದರಿಸುವುದಕ್ಕೆ ಹೊರಟಿದೆ. ಅದು ಬೇರೆ ವಿಚಾರ. ಇವತ್ತು ಈ ಮದ್ಯಪಾನದಲ್ಲಿ ಏನು ವ್ಯವಸ್ಥೆ ಇದೆ, ಅದನ್ನು ನೋಡಬೇಕು. ಈ ಮದ್ಯಪಾನ ಸಂಪೂರ್ಣವಾಗಿ ಸರ್ಕಾರದ ಒಂದು ಸ್ವಾಮ್ಯಕ್ಕೆ ಒಳಪಟ್ಟಿರತಕ್ಕ ವಿಚಾರ. ಮದ್ಯದ ತಯಾರಿಕೆಯಾಗಲೀ ಅಥವಾ ಅದರ ವಿತರಣೆಯಾಗಲೀ ಇವತ್ತು ಬೇರೆ ಯಾರೂ ಮಾಡುವಹಾಗೆ ಇಲ್ಲ ಸರ್ಕಾರದವರು ಹೇಳಿದರೆ ಮಾಡಬಹುದು, ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲ. ಇವತ್ತಿನದಿವಸ ಏನಾಗಿದೆ ಮಾನ್ಯ ಅಧ್ಯಕ್ಷರೇ? ಸರ್ಕಾರ ಈ ಒಂದು ಬಾಬಿನಿಂದ ವಿಶೇಷವಾಗಿ ಆದಾಯವನ್ನು ನಿರೀಕ್ಷೆ ಮಾಡುತ್ತಿದೆ. ತಮಗೆ ಈ ಬಗ್ಗೆ ನೆನಪಿರಬಹುದು. ಹಿಂದೆ ಒಮ್ಮೆ ಚರ್ಚೆಯ ಕಾಲದಲ್ಲಿ ಈ ವಿಷಯವನ್ನು ಎತ್ತಿದಾಗ ಒಂದು ಮಾತನ್ನು ಹೇಳಿದರು. ಮುಂದಿನ ತಿಂಗಳು ಸರ್ಕಾರಿ ನೌಕರರಿಗೆ ಸಂಬಳ ಕೊಡದ ಪರಿಸ್ಥಿತಿಯಲ್ಲಿ ಇದ್ದಾಗ ಆ ಒಂದು ಕಾನೂನನ್ನು ಜಾರಿಗೆ ಕೊಟ್ಟೆ ಎಂದು ಮಾನ್ಯ ರಾಮಕೃಷ್ಣ ಹೆಗ್ಡೆಯವರು ಹೇಳಿದರು. ಸರ್ಕಾರಕ್ಕೆ ಸುಮ್ಮನೆ ಬರಬೇಕಾದ ಆದಾಯ ನಿಂತುಹೋಗಿದ್ದಾಗ, ಕಳ್ಳಬಟ್ಟಿ ತಾಂಡವವಾಡುತ್ತಿದ್ದ ಕಾಲದಲ್ಲಿ ಅದನ್ನು ತಂದದ್ದರ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಆದಾಯ ಬರಬೇಕು. ಪ್ರಪಂಚದಲ್ಲಿ ಯಾವುದೇ ವ್ಯವಸ್ಥೆಯಿಂದ ಸರ್ಕಾರಕ್ಕೆ ಆದಾಯ ಬರಬಾರದು ಎಂದು ನಾನು ಹೇಳುವುದಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರವನ್ನು ತೆಗೆದುಕೊಂಡರೂ ಕೂಡಾ ಆಗಿನ ಕಾಲದಲ್ಲಿ ಯಾವ ಯಾವ ಬಾಬುಗಳಲ್ಲಿ ಹಣ ಬರಬೇಕೋ ಅವೆಲ್ಲವುಗಳಿಂದಲೂ ಬರಬೇಕೆಂದು ಆಗಲೇ ಹೇಳಿದ್ದಾನೆ. ಅರ್ಥಶಾಸ್ತ್ರದ ಪ್ರಕಾರ ಆದಾಯ ಎಲ್ಲೆಲ್ಲಿಂದ ಬರಬೇಕೋ ಅಲ್ಲಿಂದ ಎಲ್ಲಾ ಬರಬೇಕೆಂದು ಹೇಳಿಬೇಕಾಗುತ್ತದೆ. ಆದರೆ ಇವತ್ತು ಏನಾಗಿದೆ, ಈ ವಿಷಯವನ್ನು ನಾನು ಆಂಗ್ಲ ಭಾಷೆಯಲ್ಲಿ ಮೊನೂಚ್ಚಾಗಿ ಹೇಳಬೇಕೆನ್ನುವುದಾದರೆ now the Government has come to have a vested interest in increased excise income every year. ಪ್ರತಿವರ್ಷವೂ ಕೂಡಾ ಈ ಒಂದು ಮದ್ಯಪಾನದ ಬಾಬತ್ತಿನಿಂದ ಹೆಚ್ಚು ಹೆಚ್ಚು, ಹೆಚ್ಚು ಹೆಚ್ಚು ಹಣ ಬರಬೇಕು ಎಂದೆನ್ನುವ ಗುಂಗು ಸರ್ಕಾರದ ತಲೆಯಲ್ಲಿದೆ. ಯಾವುದೇ ಮುಖ್ಯಮಂತ್ರಿ ಯಾಗಲೀ, ಯಾವದೇ ಅರ್ಥ ಮಂತ್ರಿಯಾಗಲೀ, ಅಬಕಾರಿ ಹರಾಜಿನ ಕಾಲ ಬಂದಂತಹ ಸಮಯದಲ್ಲಿ ಬಹಳ ಟೆನ್‌ಷನ್‌ನಲ್ಲಿ ಇರುತ್ತಾರೆ. ಹೋದವರ್ಷಕ್ಕಿಂತ ಈ ವರ್ಷ ಕಡಿಮೆ ಆದಾಯ ಬಂದರೆ ಆತ ಕೆಟ್ಟ. ಆದಷ್ಟೂ ಹೋದವರ್ಷಕ್ಕಿಂತ ಈ ವರ್ಷ ಜಾಸ್ತಿಯಾಗಬೇಕು, ಅದು ಒಂದು ಮೈಲಿಗಲ್ಲು ಮುಟ್ಟಬೇಕೆಂದು ಕಾಯುತ್ತಿರುತ್ತಾರೆ. ಆದರಲ್ಲಿ ಪರಾಕ್ರಮ ಸಾಧನೆಯಾಗುತ್ತದೆಂದು ಒಂದು ಗುಂಪು. ಇದಕ್ಕಾಗಿಯೇ ಒಂದು ಎಕ್ಸೈಸ್ ಕಾಂಟ್ರಾಕ್ಟ್ ಪದ್ಧತಿಯನ್ನು ನಾವು ಜಾರಿಗೆ ತಂದಿದ್ದೇವೆ. ಹರಾಜಿನಲ್ಲಿ ಆದನ್ನು ವಿತರಣೆ ಮಾಡಿ, ಗುತ್ತಿಗೆ ಪಡೆದವರಿಂದ ಸರ್ಕಾರಕ್ಕೆ ಇಂತಿಷ್ಟು ಟ್ಯಾಕ್ಸ್ ಬರಬೇಕೆಂದು ಇರುತ್ತದೆ. ಈ ಒಂದು ವಿತರಣೆಯಲ್ಲಿ ಪ್ರತಿವರ್ಷವೂ ಸಾಕಷ್ಟು ಸ್ಪರ್ಧೆಯನ್ನು ಉಂಟು ಮಾಡುತ್ತಾ, ಏಕಸ್ವಾತ್ ಏನಾದರೂ ಒಂದು ರಿಂಗ್ ಅನ್ನು ಮಾಡಿಕೊಂಡಿದ್ದರೆ ಅದನ್ನು ಛಿದ್ರಿಸತಕ್ಕ ಕೆಲಸವನ್ನು ಮಾಡಿ, ಪ್ರತಿವರ್ಷವೂ ಹೊಸ ಹೊಸ ಜನ ಬರುವಂತೆ ಮಾಡಿ. ಯಾರು ಯಾರು ಒಟ್ಟಾಗಿದ್ದಾರೆ ಎಂದು ಗಮನದಲ್ಲಿ ಇಟ್ಟು ಕೊಂಡು ಎಲ್ಲಾ ಬೇಪುಗಾರಿಕೆಯನ್ನು ಉಪಯೋಗಿಸಿ ಗುಂಪುಗಾರಿಕೆಯನ್ನು ಛಿದ್ರಿಸಿ ಆದಷ್ಟು ಪೈಪೋಟಿ ಬರುವಂತೆ ಕೆಲಸ ಮಾಡಲಾಗುತ್ತಿದೆ. ಪೈಪೋಟಿ

ಬಂದು ಒಬ್ಬರು ೧೦ ಲಕ್ಷಕ್ಕೆ ಕೇಳಿದರೆ, ಇನ್ನೊಬ್ಬರು ೧೨ ಲಕ್ಷ ರೂಪಾಯಿಗಳಿಗೆ ಕೇಳುವಂತೆ, ಮತ್ತೊಬ್ಬರು ೨೦ ಲಕ್ಷ ರೂಪಾಯಿಗಳಿಗೆ ಕೇಳುವಂತೆ ಮಾಡುವುದು. ಈ ರೀತಿ ದುಡ್ಡಿಗೆ ದುಡ್ಡು ಎತ್ತಿಕಟ್ಟಿ ಹೆಚ್ಚಿ ಆದಾಯವನ್ನು ಪಡೆಯಬೇಕು ಎನ್ನುವ ಗುರಿ ಇದೆ, ಈ ಗುರಿಯಿಂದ ಪ್ರತಿವರ್ಷವೂ ದರ ಏರುತ್ತಾ ಏರುತ್ತಾ ಹೋಗುತ್ತಿದೆ. ಮಾದ್ಯಮಾನದಿಂದ ಬರತಕ್ಕ ಆದಾಯ ವಿಷದ ರೂಪದಲ್ಲಿ ಯಾವ ರೀತಿ ಏರುತ್ತಿದೆ ಎಂದರೆ, ಈ ಪ್ರಮಾಣದಲ್ಲಿ ಬೇರೆ ಯಾವ ಆದಾಯವೂ ಏರುತ್ತಿಲ್ಲ. ಇದು ಹೇಗೆ ಏರುತ್ತಿದೆ ಎನ್ನುವ ಬಗ್ಗೆ ಯಾರೂ ಚಿಂತನೆ ಮಾಡುವುದಕ್ಕೆ ಹೋಗಿಲ್ಲ. ಇದು ಎಲ್ಲಿಂದ ಬರುತ್ತಿದೆ? ಇದಕ್ಕೆ ಹಣ ಎಲ್ಲಿಂದ ಬರುತ್ತಿದೆ.

ಅಧ್ಯಕ್ಷರು.—ನೀವು ೧೫ ನಿಮಿಷದಿಂದ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಚ್. ಶ್ರೀನಿವಾಸ್.—ಬಹಳ ಕಪ್ಪ ಸ್ವಾಮಿ. ನಾನು ಇನ್ನೂ ಮಾಂಸ್ಯ ವಿಷಯಕ್ಕೇ ಬಂದಿಲ್ಲ.

ಅಧ್ಯಕ್ಷರು.—ನಿಮಗೆ ಈ ಬಗ್ಗೆ ೨೫ ನಿಮಿಷ ಅಲಾಟ್ ಮಾಡಲಾಗಿದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇಷ್ಟು ಅಲ್ಪಕಾಲದಲ್ಲಿ ಇದನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಇವತ್ತು ವೇಳೆಯಾಗಿದ್ದರೆ ಇಂದು ಮುಗಿಸಿ ಮತ್ತೆ ಮುಂದಿನ ದಿನ ಇದನ್ನು ಮುಂದುವರಿಸೋಣ. ಆದರೆ ಇವನ್ನು ಕಟ್‌ಷಾರ್ಟ್ ಮಾಡಿದರೆ ಇದರ ಅರ್ಥವೇ ಹೋಗಿಬಿಡುತ್ತದೆ.

ಅಧ್ಯಕ್ಷರು.—ನಿಮಗೆ ೨೫ ನಿಮಿಷ ನಿಗಧಿ ಮಾಡಲಾಗಿತ್ತು.

ಶ್ರೀ ಕೆ.ಎಚ್. ಶ್ರೀನಿವಾಸ್.—ಬೇಕಾದರೆ ಮುಂದಿನ ದಿವಸ ತೆಗೆದುಕೊಳ್ಳೋಣ. ಒಂದು ಪಕ್ಷ ಈ ಸೆಷನ್‌ನಲ್ಲಿ ಆಗಲಿಲ್ಲವೆಂದರೆ ಇನ್ನೊಂದು ಸೆಷನ್‌ನಲ್ಲಿ ಕಂಳಿತು ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ.ಪಿ. ಪ್ರಕಾಶ್.—ಮದ್ಯಪಾನವನ್ನು ಮಧ್ಯದಲ್ಲೇ ಮುಂದಕ್ಕೆ ಹಾಕುವುದು ಸಾಧ್ಯವಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಇವತ್ತು ಇಲ್ಲಿಗೇ ಮುಗಿಸಿ, ಮುಂದಿನ ದಿನಗಳಲ್ಲಿ ಮತ್ತೆ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಆಯಿತು. ೨ ಗಂಟೆಯವರೆಗೆ ಮಾತನಾಡಿ.

ಶ್ರೀ ಕೆ.ಎಚ್. ಶ್ರೀನಿವಾಸ್.—ಆಯಿತು. ೨ ಗಂಟೆಯವರೆಗೆ ಮಾತನಾಡುತ್ತೇನೆ. ಈ ಬಗ್ಗೆ ಪರಿಪೂರ್ಣವಾದ ಅಭಿಪ್ರಾಯವನ್ನು ಹೇಳಿದ್ದಿದ್ದರೆ ಮುಂದೆ ಮಾನ್ಯ ಸದಸ್ಯರು ಹೆಚ್ಚು ಬೆಳಕುಚೆಲ್ಲುವುದಕ್ಕಾಗುವುದಿಲ್ಲವಾದ್ದರಿಂದ ಎಲ್ಲಾ ವಿಷಯಗಳನ್ನೂ ಸದನದಲ್ಲಿ ತಿಳಿಸಬೇಕೆಂದು ಆಸೆ ಪಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್.—ಈಗ ಅವರು ಮುಗಿಸಲಿ ಮುಂದಿನ ದಿನ ಇದನ್ನು ಅವರು ಪ್ರಸ್ತಾಪ ಮಾಡಲಿ.

ಅಧ್ಯಕ್ಷರು.—ಈಗ ಸಭೆಯು ವೇಳಕ್ಕೆ ಎದ್ದು ಪುನಃ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳುವುದು.

ಸಭೆಯು ಮಧ್ಯಾಹ್ನ ಒಂದು ಘಂಟೆ ನಲವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಹತ್ತನೇ ಫೆಬ್ರುವರಿ ೧೯೮೬ರ ಸೋಮವಾರದಂದು ಬೆಳಿಗ್ಗೆ ಹನ್ನೊಂದು ಘಂಟೆಗೆ ಸೇರಲು ನಿಶ್ಚಯಿಸಲಾಯಿತು.